ಶ್ರೀ ಎ. ಮುನಿಯಪ್ಪ.—ಇದರ ಮಾಹಿತಿ ಗೊತ್ತಿಲ್ಲವೆಂದು ಹೇಳಿದರೆ ಹೇಗೆ? ಹಾಗಾದರೆ ಈ ಕೆರೆಗಳು ಯಾರ ರೆಕ್ಕದಲ್ಲಿ ಇದುವರೆಗೆ ಇದ್ದವು? ಸರ್ಕಾರದ ರೆಕ್ಕದಲ್ಲಿ ಇಲ್ಲವೆಂದು ಹೇಳಿದರೆ, ಇನ್ನು ಯಾರನ್ನು ಕೇಳಬೇಕು?

ಶ್ರೀ ಡಿ. ಪರಮೇಶ್ವರಪ್ಪ.—ಪಿ.ಡಬ್ಲ್ಯು.ಡಿ.ಯಲ್ಲಿ ಮೇಂಟೇನ್ ಮಾಡಿರುವ ಪಟ್ಟಿಯಲ್ಲಿ ಈ ಕೆರೆಗಳ ಹೆಸರು ನಮೂದಾಗಿಲ್ಲ. ಆ ಒಂದು ಆಧಾರದಮೇಲೆ ಬಹುಶಃ ಇವು ಪ್ರೈವೇಟ್ ಟ್ಯಾಂಕ್ಸ್ ಎಂದು ಹೇಳಬೇಕಾಗುತ್ತದೆ.

ಶ್ರೀ ಎ. ಮುನಿಯಪ್ಪ.—ಈ ಕೆರೆಗಳು ಒಂದು ನಿಮ್ಮ ಹತ್ತಿರ ಇರಬೇಕು, ಇಲ್ಲದಿದ್ದರೆ, ತಾಲ್ಲೂಕು ಬೋರ್ಡಿನಲ್ಲಿರಬೇಕು. ಇದರ ರೆಕ್ಕವೇ ಇಲ್ಲವೆಂದು ಹೇಳಿದರೆ ಇನ್ನು ನಾವು ಯಾರನ್ನು ಕೇಳಬೇಕು?

ಶ್ರೀ ಡಿ. ಪರಮೇಶ್ವರಪ್ಪ.—ನಮಗೆ ಸಂಬಂಧಪಟ್ಟದ್ದಕ್ಕೆ ನಾವು ಉತ್ತರ ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ನಮ್ಮ ಇಲಾಖೆಯಿಂದ ಬಂದ ಮಾಹಿತಿಯನ್ನು ತಮಗೆ ಕೊಡುತ್ತಿದ್ದೇನೆ. ಅದರ ಪ್ರಕಾರ ಈ ಟ್ಯಾಂಕ್ ರಿಜಿಸ್ಟರಿನಲ್ಲಿ ನಮೂದಿಸಿಲ್ಲವೆಂದು ಬಂದಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಪಿ ಡಬ್ಲ್ಯು ಡಿ ಯ ರಿಜಿಸ್ಟರಿನಲ್ಲಿರತಕ್ಕಂತದಕ್ಕೆ ತಾನು ಉತ್ತರ ಕೊಡುತ್ತೇನೆಂದು ಹೇಳಿದರು. ಅದರೆ ರೆವಿನ್ಯೂ ಲಿಸ್ಟಿನಲ್ಲಿರತಕ್ಕಂತಹ ಮತ್ತು ತಾಲ್ಲೂಕು ಬೋರ್ಡಿನಲ್ಲಿರತಕ್ಕಂತದಕ್ಕೆಲ್ಲಾ ಸರ್ಕಾರ ಸಂಬಂಧವಿಲ್ಲವೇ? ಅದಕ್ಕೆ ಉತ್ತರ ಕೊಡಬೇಕೇ, ಬೇಡವೇ?

Sri D. PARAMESWARAPPA.—I made it clear that we are responsible for the tanks that are maintained by P.W.D. and not for other tanks.

ಶ್ರೀ ಬಿ. ಎನ್. ರಾಮೇಗೌಡ.—ಇದರಲ್ಲಿ 770ನೇ ಪ್ರಶ್ನೆಯಲ್ಲಿ ಎರಡನ್ನು ಮಾತ್ರ ಕೊಟ್ಟು, ಒಂದಕ್ಕೆ ತನಿಖೆ ನಡೆಯುತ್ತಿದೆ ಎಂದೂ, ಇನ್ನೊಂದಕ್ಕೆ ಪ್ರಸೋಸಲ್ ಬಂದಿದೆ ಎಂದು ಹೇಳಿದ್ದೀರಿ. ಮಿಕ್ಕ ನಾಲ್ಕು ಕೆರೆಗಳ ವಿಚಾರ ಏನಾಗಿದೆ?

ಶ್ರೀ ಡಿ. ಪರಮೇಶ್ವರಪ್ಪ.—ಕುಂಬಾರಕಟ್ಟೆ ಕೆರೆ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದೇವೆ. ಇದಕ್ಕೆ ಕಾರಣ ಇಷ್ಟೆ: ಇದರ ಕೆಳಗಡೆ ಅದೇ ವ್ಯಾಲಿನಲ್ಲಿ ಒಂದು ಬಡನೂರು ಕೆರೆ ಇದೆ. ಇದನ್ನು ಕಟ್ಟುವುದರಿಂದ ಬಡನೂರು ಕೆರೆಗೆ ಧಕ್ಕೆ ಆಗಬಹುದು ಎಂದು ಅಲ್ಲಿ ಕೆರೆ ಕಟ್ಟುವುದು ನೂಕ್ಷವಲ್ಲವೆಂದು ಹೇಳಿದ್ದೇವೆ. ಎರಡನೇಯದು ಶ್ರೀರಂಗಪಟ್ಟಣದ ಹತ್ತಿರ ಇರತಕ್ಕಂತಹ ಕೆರೆಗೆ ಇನ್‌ವೆಸ್ಟಿಗೇಶನ್ ಮಾಡುತ್ತಿದ್ದಾರೆ. ಕೆಂಚಮ್ಮನಹಳ್ಳಿಯ ಕೆರೆ ಕಟ್ಟುವುದಕ್ಕೆ ಈಗಾಗಲೇ ಪರಿಶೀಲನೆ ಆಗುತ್ತಾ ಇದೆ. ವೀರ್ಲಗೊಂಡಿಯಲ್ಲಿರುವ ಕೆರೆಯನ್ನು ತೆಗೆದುಕೊಂಡಿದ್ದಾರೆ. ಆದರೆ ಅದನ್ನು ಮುಂದುವರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾಲ್ಕನೆಯದು ಬೈದನೂರು ಕೆರೆಯ ವೇಸ್ಟ್‌ವೇರನ್ನು ಎತ್ತರ ಮಾಡುವುದಕ್ಕೆ ಕೇಳಿದ್ದಾರೆ. ಅದರ ಕೆಳೇಸಿಟಿ ಕಡಿಮೆ ಇರುವುದರಿಂದ ಇನ್ನೂ ಹೆಚ್ಚಿಸುವುದಕ್ಕಾಗುವುದಿಲ್ಲ. ಇನ್ನು ಕಡಪಲ ಕೆರೆಯ ಕೋಡಿಯನ್ನು ಎತ್ತರಿಸಕೂಡದು ಎಂದು ತಾಂತ್ರಿಕ ಅಭಿಪ್ರಾಯ ಇದೆ.

Sanction of Primary School Teachers in Tumkur District

788. Sri B. GANGANNA ((Kallambella).—

Will the Minister for Education be pleased to state :—

(*a*) whether it has come to the notice of the Government that there is dearth of Primary School Teachers in Tumkur District since the last 2-3 years ;

(*b*) the number of Teachers required as per rules ;

(*c*) the arrangements made to fill up the required number of teachers ?

Sri N. M. KOTRABASAIAH SOGI (Deputy Minister for Education).—

(*a*) Yes.

(*b*) There are no Rules. Teachers are sanctioned at present at the rate of one for every 45 pupils. In Tumkur District, the Teacher-pupil ratio is 1 : 39 in Standards I to IV in urban areas and 1 : 40 in rural areas.

As regards Middle Schools, the ratio is 1 : 26 in urban areas as well as rural areas, but there are several single-teacher schools which require additional teachers. Similarly, there are several Middle Schools which require additional Teachers.

(*c*) Additional Teachers are being sanctioned according to availablity of funds. Teachers are also being restricted on the basis of actual attendance of pupils in schools instead of an enrolment.

ಶ್ರೀ ಬಿ. ಗಂಗಣ್ಣ.—ಈಗ ತಮ್ಮ ಉತ್ತರದಲ್ಲಿ ಹಾಜರಾತಿಯನ್ನು ಅನುಸರಿಸಿ, ಉಪಾಧ್ಯಾಯರ ನೇಮಕವನ್ನು ಪ್ರತಿಗೊಳಿಸಲಾಗುತ್ತದೆ ಎಂದು ಹೇಳಿದ್ದೀರಿ. ಈ ಹಾಜರಾತಿ ಇಲ್ಲದಿರುವುದಕ್ಕೆ ಗ್ರಾಮಾಂತರ ಪ್ರದೇಶಗಳಲ್ಲಿ ಉಪಾಧ್ಯಾಯರುಗಳು ಇಲ್ಲದಿರುವ ಒಂದು ಕಾರಣವಲ್ಲವೇ ? ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ?

†ಶ್ರೀ ಎನ್.ಎಂ. ಕೊಟ್ರಬಸಯ್ಯ ಸೋಗಿ.—ಅದೂ ಒಂದು ಕಾರಣವಿರಬಹುದು. ಆದರೆ ಮುಖ್ಯವಾದ ಕಾರಣವೆಂದು ಹೇಳುವುದಕ್ಕಾಗುವುದಿಲ್ಲ. ಇನ್ನೂ ಅನೇಕ ಕಾರಣಗಳು ಇರಬಹುದು.

ಶ್ರೀ ಬಿ. ಗಂಗಣ್ಣ.—ತುಮಕೂರು ಜಿಲ್ಲೆಯಲ್ಲಿ ಎರಡು ಮೂರು ವರ್ಷಗಳಿಂದ ಉಪಾಧ್ಯಾಯರ ಅವಶ್ಯಕತೆ ಇದೆ ಎಂದು ಒಪ್ಪಿಕೊಂಡಿದ್ದೀರಿ. 1968–69 ರಲ್ಲಿ ಎಷ್ಟು ಜನ ಉಪಾಧ್ಯಾಯರು ಬೇಕಾಗುತ್ತಾರೆಂದು ಹೇಳುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಉಪಾಧ್ಯಾಯರನ್ನು ನೇಮಕ ಮಾಡತಕ್ಕ ವಿಷಯದಲ್ಲಿ ಶಾಲೆಗಳಲ್ಲಿ ಅಕ್ಚುಯರ್ ಆಗಿ ಹಾಜರಿರುವ ವಿದ್ಯಾರ್ಥಿಗಳ ಆಧಾರದ ಮೇಲೆ ಈಗ ಹಾಲಿ ಇರತಕ್ಕ ಉಪಾಧ್ಯಾಯರನ್ನು ರೀ ಡಿಸ್ಟ್ರಿಬ್ಯೂಟ್ ಮಾಡಬೇಕು ಎಂದು ಮಾಡುತ್ತಿದ್ದೇವೆ.

ಶ್ರೀ ಬಿ. ಗಂಗಣ್ಣ.—ಈಗ ಹಾಲಿ ಇರತಕ್ಕ ಉಪಾಧ್ಯಾಯರ ಸಂಖ್ಯೆಯಲ್ಲಿಯೇ ಎಲ್ಲಾ ಶಾಲೆಗಳಿಗೂ ಉಪಾಧ್ಯಾಯರನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇನ್ನು ಮುಂದಕ್ಕಾದರೂ ಅವಶ್ಯಕವಾಗಿ ಬೇಕಾಗುವ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವಶ್ಯಕತೆಯ ಪ್ರಕಾರ ಹೆಚ್ಚಿಗೆ ಶಿಕ್ಷಕರನ್ನು ನೇಮಕ ಮಾಡತಕ್ಕ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಎಂ. ಎನ್. ರಾಮಣ್ಣ.—ಈಗ ತಾವು ಹೇಳಿರುವ ಹಾಗೆ 1 : 40 ದಾಮಾಷದ ಪ್ರಕಾರ ತುಮಕೂರು ಜಿಲ್ಲೆಗೆ ಎಷ್ಟು ಜನ ಉಪಾಧ್ಯಾಯರು ಬೇಕಾಗುತ್ತಾರೆ, ಮತ್ತು 1968ನೇ ಮೇ ತಿಂಗಳಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಎಷ್ಟು ಜನ ಉಪಾಧ್ಯಾಯರು ಇದ್ದರು ಎಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಇದರೊಳಗೆ 1 : 40 ರೇಷಿಯೋ ಏನಿದೆ ಅದನ್ನು 1 : 30 ಮಾಡಬೇಕೆಂದು ಸರ್ಕಾರದವರು ಒಂದು ನೀತಿಯನ್ನು ಹಾಕಿಕೊಂಡಿದ್ದಾರೆ. ಆಕ್ಚುಯರ್ ಅಟೆಂಡೆನ್ಸ್ ಪ್ರಕಾರ ಈಗ ಇರುವ ಪರಿಸ್ಥಿತಿಯಲ್ಲಿ 1 : 30 ಧಾಮಾಷಾ ಆಗುತ್ತದೆ ಆದಕಾರಣ ಹೆಚ್ಚಿಗೆ ಶಿಕ್ಷಕರನ್ನು ನೇಮಕ ಮಾಡುವ ಅವಶ್ಯಕತೆ ಕಂಡುಬಂದರೆ ನೇಮಕ ಮಾಡುತ್ತೇವೆ.

ಶ್ರೀ ಎಂ. ಎನ್. ರಾಮಣ್ಣ.—1968ನೇ ಇಸವಿ ಮೇ 22ನೇ ತಾರೀಖು ಸ್ಕೂಲುಗಳು ಪ್ರಾರಂಭ ಆದವು ಆಗ ತುಮಕೂರು ಜಿಲ್ಲೆಯಲ್ಲಿ 1 : 40 ರ ರೇಷಿಯೋ ಪ್ರಕಾರ ಎಷ್ಟು ಜನ ಉಪಾಧ್ಯಾಯರು ಬೇಕಾಗಿತ್ತು. ಆಗ ಎಷ್ಟು ಜನ ಉಪಾಧ್ಯಾಯರು ಆ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದರು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ಬಗ್ಗೆ ನೋಟೀಸ್ ಬೇಕು